# ನಗರಸಭಾ ಕಾರ್ಯಾಲಯ, ಕಾರವಾರ

ನಂ: ನಸಕಾ/ಕಾವಿ/ನಗರಸಭಾ ನಿಧಿ/ಟೆಂಡರು 1013/2009-10 ದಿನಾಂಕ:- 01-03-2010

## ಟೆಂಡರ ಪ್ರಕಟಣೆ

ನಗರಸಭೆಗೆ 2009-10 ನೇ ಸಾಲಿನ ನಗರಸಭೆಯ ಅವ್ಯಯವದಲ್ಲಿ ಅನುಮೋದನೆಗೊಂಡ ಒಟ್ಟು ರೂ. 40.33 ಲಕ್ಷ ಅಂದಾಜು ಮೊತ್ತದ 27 ಸಂಖ್ಯೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ 2009-10ನೇ ಸಾಲಿಗೆ ನಗರ ಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರು ದಿನಾಂಕ : 12-04-2010 ರಂದು ಸಾಯಂಕಾಲ 4.30 ಗಂಟೆಯ ಒಳಗೆ ದ್ವಿ ಪ್ರತಿಯಲ್ಲಿ ಶೀಲ್ ಬಂದ್ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನೀಡಿರುವ ಶರತ್ತುಗಳನ್ನು ಪಾಲಿಸಿ ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರಲ್ಲಿ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

## ಶರತ್ತುಗಳು

1. ಮೇಲಿನ ಎಲ್ಲಾ ಪ್ಯಾಕೇಜುಗಳಿಗೆ ಪ್ರತ್ಯೇಕ ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ:- 01-03-2010 ರಿಂದ ದಿನಾಂಕ:- 09-04-2010 ರ ಸಂಜೆ 5.30 ರ ವರೆಗೆ ರಜಾ ದಿನಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ದಿನಗಳ, ಕಚೇರಿ ಸಮಯದಲ್ಲಿ, ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರತಿ ಟೆಂಡರ ಫಾರ್ಮಿನ ಬೆಲೆ ನಿಗದಿ ಪಡಿಸಲಾಗಿದ್ದು ಶೇ. 12.5% ವ್ಯಾಟ್ ರಂತೆ ಹೆಚ್ಚುವರಿ ತೆರಿಗೆ ಶುಲ್ಕವನ್ನು ಪಾವತಿ ಮಾಡಕತಕ್ಕದ್ದು. ಖಾಲಿ ಟೆಂಡರ ಫಾರ್ಮಗಳ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.
2. ದಿನಾಂಕ:-13-04-2010 ರಂದು ಬೆಳಗ್ಗೆ 11.00 ಗಂಟೆಗೆ, ನಗರಸಭೆಯ ಸಭಾ ಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವಿಕೃತವಾಗಿರುವ ಟೆಂಡರಗಳನ್ನು ಹಾಗೂ ದರವಾರಗಳನ್ನು ತೆರೆಯಲಾಗುವುದು. ಎಲ್ಲಾ ಬಿಡ್ಡುಗಳನ್ನು ತೆರೆದ ನಂತರ ಅರ್ಹ ಬಿಡ್ಡುದಾರರ ವಿವರವನ್ನು ನಗರಸಭೆಯಿಂದ ತಿಳಿಸಲಾಗುವುದು.
3. ಹೆಚ್ಚಿನ ವಿವರಗಳಿಗಾಗಿ ನಗರಸಭೆಯಲ್ಲಿ ವಿಚಾರಿಸಬಹುದು ಅಥವಾ ನಗರಸಭೆಯ ಅಂತರಜಾಲ www.karwarcity.gov.in ನಲ್ಲಿ ಪಡೆಯಬಹುದಾಗಿದೆ.

| | | |
|---|---|---|
| **ಸಹಿ ಇದೆ.** | **ಸಹಿ ಇದೆ.** | **ಸಹಿ ಇದೆ.** |
| [ ಎ.ಡಿ. ರೇವಣಕರ] | [ಡಾ॥ ನಿತಿನ್ ಎಸ್. ಪಿಕ್ಳೆ] | [ಗಣಪತಿ.ಡಿ.ಉಳವೇಕರ] |
| ಪೌರಾಯುಕ್ತರು | ಚೇರಮನ್ | ಅಧ್ಯಕ್ಷರು |
| ನಗರಸಭೆ ಕಾರವಾರ | ಸ್ಥಾಯಿ ಸಮಿತಿ | ನಗರಸಭೆ ಕಾರವಾರ |
| | ನಗರಸಭೆ ಕಾರವಾರ | |

# ನಗರಸಭಾ ಕಾರ್ಯಾಲಯ, ಕಾರವಾರ

ನಂ:ನಸಕಾ/ಕಾವಿ/ನಗರಸಭಾ ನಿಧಿ/ಟೆಂಡರು 1013/2009-10 ದಿನಾಂಕ:- 01-03-2010

## <u>ಅಲ್ಪಾವಧಿ ಟೆಂಡರ ಪ್ರಕಟಣೆ</u>

ನಗರಸಭೆಗೆ 2009-10 ನೇ ಸಾಲಿನ ನಗರಸಭೆಯ ಅವ್ಯಯವದಲ್ಲಿ ಅನುಮೋದನೆಗೊಂಡ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ 2009-10ನೇ ಸಾಲಿಗೆ ನಗರ ಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರು ದಿನಾಂಕ : 12-04-2010 ರಂದು ಸಾಯಂಕಾಲ 4.30 ಗಂಟೆಯ ಒಳಗೆ ದ್ವಿ ಪ್ರತಿಯಲ್ಲಿ ಶೀಲ್ ಬಂದ್ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನೀಡಿರುವ ಶರತ್ತುಗಳನ್ನು ಪಾಲಿಸಿ ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರಲ್ಲಿ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

| ಕ್ರ ಸಂ. | ಪ್ಯಾಕೇಜು ವಿವರ | | | ಪ್ಯಾಕೇಜು ಮೊತ್ತ ರೂ. ಲಕ್ಷಗಳಲ್ಲಿ | ಮುಂಗಡ ಠೇವಣಿ ಮೊತ್ತ (ರೂ ಗಳಲ್ಲಿ) | ಕೆಲಸದ ಅವಧಿ | ಗುತ್ತಿಗೆ ದಾರರ ದರ್ಜೆ | ಟೆಂಡರು ಮಾದರಿ | ಟೆಂಡರು ಫಾರಂ ಶುಲ್ಕ (ರೂ ಗಳಲ್ಲಿ) |
|---|---|---|---|---|---|---|---|---|---|
| | ಕ್ರ ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | | | | | | |
| 1 | ಪ್ಯಾಕೇಜು ನಂ. 01 | | | 1.00 | 5,000/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭೆ ಕಛೇರಿ ಹಿಂಭಾಗದಲ್ಲಿ ಮೂತ್ರಿಖಾನೆ ನಿರ್ಮಿಸುವುದು | 20000.00 | | | | | | |
| | 2 | ವಾರ್ಡ ನಂ. 14 ತಾಮಸೇವಾಡಾದಲ್ಲಿ ಮುರಂ ಭಾರವ ಮಾಡುವುದು | 20000.00 | | | | | | |
| | 3 | ವಾರ್ಡ ನಂ. 17 ರಾಮು ಅಂಗಡಿಯಿಂದ ಶಿವಾನಂದ ತಾಮಸೆ ಮನೆ ತನಕ ನಾಲಾ ಸೈಡವಾಲ್ ದುರಸ್ತಿ. | 20000.00 | | | | | | |
| | 4 | ವಾರ್ಡ ನಂ. 24, ಗಿಂಡಿವಾಡ ಸಾಯಿಮಂದಿರ ರಸ್ತೆ ದುರಸ್ತಿ. | 20000.00 | | | | | | |
| | 5 | ವಾರ್ಡ ನಂ. 28, ಕಠಿಣಕೋಣ ರುದ್ರಭೂಮಿಗೆ ಮಣ್ಣು ಬರಾವು ಮಾಡುವುದು. | 20000.00 | | | | | | |
| 2 | ಪ್ಯಾಕೇಜು ನಂ. 02 | | | 0.96 | 5,000/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ವಾರ್ಡ ನಂ. 22 ಸೋನಾರವಾಡ ಪಿ&ಟಿ ಕ್ವಾರ್ಟರ್ಸ ಮುಂದಿನ ಉಮೇಶ ಮನೆ ರಸ್ತೆ ಮತ್ತು ಚರಂಡಿ ದುರಸ್ತಿ. | 20000.00 | | | | | | |
| | 2 | ವಾರ್ಡ ನಂ. 22 ಸೋನಾರವಾಡ ಕೇಶವ ಶೇಟ ಮುಖ್ಯ ರಸ್ತೆ ಚರಂಡಿ ದುರಸ್ತಿ. | 20000.00 | | | | | | |
| | 3 | ವಾರ್ಡ ನಂ. 24 ನಾಗವಾಡ ಕಿಶೋರ ರಾಣೆ ಮನೆ ಹತ್ತಿರದ ಚರಂಡಿಯಿಂದ ಹೂಳು ತೆಗೆದು ಹಾಳಾಗಿರುವ ಪ್ರಿಕಾಸ್ಟ ಸ್ಲಾಬ ದುರಸ್ತಿ ಪಡಿಸುವುದು | 16000.00 | | | | | | |
| | 4 | ವಾರ್ಡ ನಂ. 25, ಮಹಾಲೆವಾಡ – ಗಿಂಡಿವಾಡ ಸಾಯಿಮಂದಿರ ರಸ್ತೆ ದುರಸ್ತಿ. | 20000.00 | | | | | | |
| | 5 | ವಾರ್ಡ ನಂ. 25, ಹಿರೇಶಿಟ್ಟಾ ಸಾಯಿ ಮಂದಿರ ರಸ್ತೆ ದುರಸ್ತಿ ಮತ್ತು ಪಿಚಿಂಗ ಮಾಡುವದು | 20000.00 | | | | | | |

| | | | | | | | | | |
|---|---|---|---|---|---|---|---|---|---|
| 3 | **ಪ್ಯಾಕೇಜು ನಂ. 03** | | | 0.96 | 2,400/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ವಾರ್ಡ ನಂ. 17 ಕೋಡಿಬಾಗ ಮಾಂಗ್ರಾ ಪೈ ರಸ್ತೆಯಲ್ಲಿ ಪ್ರಭು ಮನೆ ಮುಂದೆ ಚರಂಡಿ ನಿರ್ಮಾಣ | 20000.00 | | | | | | |
| | 2 | ವಾರ್ಡ ನಂ. 17 ಶಿವಾಜಿವಾಡ 2008-09 ನೇ ಸಾಲಿನ ಎಸ್.ಎಫ್.ಸಿ. ಅನುದಾನದಲ್ಲಿ ನಿರ್ಮಿಸಿದ ತೆರೆದ ಬಾವಿಯ ಸುತ್ತಲೂ ಕಂಪೌಡ ಗೋಡೆ ಹಾಗೂ ಇತರೇ ಕಲಸವನ್ನು ಮಾಡುವುದು | 60000.00 | | | | | | |
| | 3 | ವಾರ್ಡ ನಂ. 31 ಚಿಣಗಾ ಜೀವನನಗರದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಬಾವಿ ದುರಸ್ತಿ. | 16000.00 | | | | | | |
| 4 | **ಪ್ಯಾಕೇಜು ನಂ. 04** | | | 0.60 | 1,500/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ಮ್ಹಾಳಸಾವಾಡಾ ಉಮೇಶ ಮಾಸ್ತ ಮನೆಯಿಂದ ವಸಂತ ಮನೆಯ ತನಕ ಇಂಟ್ಟರ್ ಲಾಕ್ ಪೇವಿಂಗ ಮಾಡುವುದು | 20000.00 | | | | | | |
| | 2 | ಸಂಕ್ರೀವಾಡಾ ಎಂ. ಎಚ್. ನಾಯ್ಕ ಮನೆಯ ಓಣಿಗೆ ಇಂಟ್ಟರ್ ಲಾಕ್ ಪೇವಿಂಗ ಮಾಡುವುದು | 20000.00 | | | | | | |
| | 3 | ಸಂಕ್ರೀವಾಡಾ ಬಬ್ರಾರಿ ಹರಿಕಾಂತ್ರ ಮನೆಯ ರಸ್ತೆಗೆ ಇಂಟ್ಟರ್ ಲಾಕ್ ಪೇವಿಂಗ ಮಾಡುವುದು | 20000.00 | | | | | | |
| 5 | **ಪ್ಯಾಕೇಜು ನಂ. 05** | | | 0.95 | 2,400/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭೆ ಕಚೇರಿ ಸುತ್ತಲಿನ ಕಂಪೌಂಡ ಗೋಡೆಗೆ ಪೈಟಿಂಗ ಮಾಡುವದು | 55000.00 | | | | | | |
| | 2 | ನಗರಸಭೆಯ ವ್ಯಾಪ್ತಿಯಲ್ಲಿ ನಗರ ಪ್ರದೇಶದ ಮುಖ್ಯ ರಸ್ತೆ ಕೂಡುವ ಸ್ಥಳಗಳಲ್ಲಿ ಹಾಲಿ ಇರುವ ರಬ್ಬರ್ ಹಂಪ್ಸ್ ಪಕ್ಕದಲ್ಲಿ ಪಿ.ಸಿ.ಸಿ. ಹಂಪ್ಸ್ ನಿರ್ಮಿಸುವುದು | 40000.00 | | | | | | |
| 6 | **ಪ್ಯಾಕೇಜು ನಂ. 06** | | | 8.00 | 20,000/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭೆಯ ಮುಖ್ಯ: ರಸ್ತೆಗಳಲ್ಲಿ ಟ್ರ್ಯಾಕ್ ಪೈಟಿಂಗ ಮಾಡುವದು | 800000.00 | | | | | | |
| 7 | **ಪ್ಯಾಕೇಜು ನಂ. 07** | | | 3.50 | 8,750/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭಾ ವ್ಯಾಪ್ತಿಯ ನಗರ ಪ್ರದೇಶದಲ್ಲಿನ ಮುಖ್ಯ ರಸ್ತೆಗಳ ಬದಿಯಲ್ಲಿ ಇರುವ ಫೂಟಪಾತ ಬದಿಯಲ್ಲಿ ಪೇಂಟಿಂಗ ಮಾಡುವದು | 350000.00 | | | | | | |
| 8 | **ಪ್ಯಾಕೇಜು ನಂ. 08** | | | 4.75 | 11,900/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರ ಪ್ರದೇಶದಲ್ಲಿನ ರಸ್ತೆಗಳ ಬದಿಯಲ್ಲಿ ಇರುವ ಫುಟ್‌ಪಾತ್ ಮೇಲೆ ಇರುವ ಮುರಿದ ಸ್ಲ್ಯಾಬ್ ಗಳನ್ನು ಬದಲಾಯಿಸುವುದು ಮತ್ತು ಮಳೆ ನೀರು ಹರಿಯಲು ಫುಟ್‌ಪಾತ್‌ನಲ್ಲಿ ಕಾಲುವೆ ಮಾಡುವುದು ಹಾಗೂ ಇಂಟ್ಟರ್ ಲಾಕ್ ಪೇವಿಂಗ್ ಮಾಡುವುದು | 475000.00 | | | | | | |

| | | | | | | | | | |
|---|---|---|---|---|---|---|---|---|---|
| 9 | **ಪ್ಯಾಕೇಜು ನಂ. 09** | | | 0.75 | 1,900/- | 2 ತಿಂಗಳು | ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭಾ ವ್ಯಾಪ್ತಿಯಲ್ಲಿ ರಸೆಗಳ ಅಂಚಿನಲ್ಲಿ ಇರುವ ಹೆಸ್ಕಾಂ ಇವರ ಮುರಿದಿರುವ ಕಂಬ ತೆಗೆಯುವುದು | 75000.00 | | | | | | |
| 10 | **ಪ್ಯಾಕೇಜು ನಂ. 10** | | | 0.86 | 1,900/- | 2 ತಿಂಗಳು | ಒಂದನೇ ದರ್ಜೆ (ವಿದ್ಯುತ್) ಮಾತ್ರ | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಸಭಾ ವ್ಯಾಪ್ತಿಯಲ್ಲಿ ಬೀದಿ ದೀಪ ಕಂಬಗಳಿಗೆ ಬೀದಿ ದೀಪ ಸೆಟ್ ಅಳವಡಿಸುವ ಕ್ಲಾಂಪ ಪೂರೈಸುವುದು. | 86000.00 | | | | | | |
| 11 | **ಪ್ಯಾಕೇಜು ನಂ. 11** | | | 6.00 | 12,000/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಭೆಯ ವ್ಯಾಪ್ತಿಯಲ್ಲಿ, ಕೋಡಿಭಾಗ್ ಮುಖ್ಯ ರಸ್ತೆಯಿಂದ ಗ್ರೀನ್ ಸ್ಟ್ರೀಟ್‌ಗ ಹೋಗಲು ಬಾಷಾ ಕಾಂಪ್ಲೆಕ್ಸ್ ಪಕ್ಕದ ಗಲ್ಲಿಗೆ ಇಂಟ್ಬರ್ ಲಾಕ್ ಮಾಡಿ ರಸ್ತೆ ಅಭಿವೃದ್ಧಿ ಮಾಡುವುದು | 600000.00 | | | | | | |
| 12 | **ಪ್ಯಾಕೇಜು ನಂ. 12** | | | 2.00 | 5,000/- | 2 ತಿಂಗಳು | ಒಂದನೇ ದರ್ಜೆ (ವಿದ್ಯುತ್) ಮಾತ್ರ | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಭೆಯ ವ್ಯಾಪ್ತಿಯಲ್ಲಿ, ಕೋಡಿಭಾಗ್ ಮುಖ್ಯ ರಸ್ತೆಯಿಂದ ಗ್ರೀನ್ ಸ್ಟ್ರೀಟ್‌ಗ ಹೋಗಲು ಬಾಷಾ ಕಾಂಪ್ಲೆಕ್ಸ್ ಪಕ್ಕದ ಗಲ್ಲಿಗೆ ಮತ್ತು ಡಾ.ಆಚಾರಿ ಗಲ್ಲಿಗೆ ಬೀದಿ ದೀಪದ ಸಲುವಾಗಿ ಕಂಬ ಮತ್ತು ತಂತಿಯನ್ನು ಎಳೆಯುವುದು | 200000.00 | | | | | | |
| 13 | **ಪ್ಯಾಕೇಜು ನಂ. 13** | | | 5.00 | 12,500/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಭೆಯ ವ್ಯಾಪ್ತಿಯಲ್ಲಿ, ವಾರ್ಡ ನಂ. 1- 15 ವರೆಗಿನ ಮುಖ್ಯ ಮಳೆ ನೀರು ಮತ್ತು ಕಿರು ಮಳೆ ನೀರು ಚರಂಡಿಗಳ ಹೂಳು ತೆಗೆದು ಸಾಗಿಸುವುದು | 500000.00 | | | | | | |
| 14 | **ಪ್ಯಾಕೇಜು ನಂ. 14** | | | 5.00 | 12,500/- | 2 ತಿಂಗಳು | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | ಐಟಂ ವಾರು | 500/- + ವ್ಯಾಟ್ 12.5% |
| | 1 | ನಗರಭೆಯ ವ್ಯಾಪ್ತಿಯಲ್ಲಿ, ವಾರ್ಡ ನಂ. 16-31 ವರೆಗಿನ ಮುಖ್ಯ ಮಳೆ ನೀರು ಮತ್ತು ಕಿರು ಮಳೆ ನೀರು ಚರಂಡಿಗಳ ಹೂಳು ತೆಗೆದು ಸಾಗಿಸುವುದು | 500000.00 | | | | | | |

## ಶರತ್ತುಗಳು

1. ಮೇಲಿನ ಎಲ್ಲಾ ಪ್ಯಾಕೇಜುಗಳಿಗೆ ಪ್ರತ್ಯೇಕ ಖಾಲಿ ಟೆಂಡರ ಫಾರ್ಮಗಳನ್ನು ದಿನಾಂಕ:- 01-03-2010 ರಿಂದ ದಿನಾಂಕ:- 09-04-2010 ರ ಸಂಜೆ 5.30 ರ ವರೆಗೆ ರಜಾ ದಿನಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ದಿನಗಳ, ಕಚೇರಿ ಸಮಯದಲ್ಲಿ, ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರತಿ ಟೆಂಡರ ಫಾರ್ಮಿನ ಬೆಲೆ ನಿಗದಿ ಪಡಿಸಲಾಗಿದ್ದು ಶೇ. 12.5% ವ್ಯಾಟ್ ರಂತೆ ಹೆಚ್ಚುವರಿ ತೆರಿಗೆ ಶುಲ್ಕವನ್ನು ಪಾವತಿ ಮಾಡಕತಕ್ಕದ್ದು. ಖಾಲಿ ಟೆಂಡರ ಫಾರ್ಮಗಳ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.
2. ಮೇಲಿನ ಯಾವತ್ತೂ ಪ್ಯಾಕೇಜಗಳಿಗೆ ಟೆಂಡರು ಸಲ್ಲಿಸುವ ಗುತ್ತಿಗೆದಾರರು ನಗರಸಭೆಯಲ್ಲಿ 2009-10 ನೇ ಸಾಲಿನಲ್ಲಿ ನೊಂದಾಯಿತರಾಗಿದ್ದವರಾಗಿರಬೇಕು.
3. ಗುತ್ತಿಗೆದಾರರು 2009-10 ನೇ ಸಾಲಿನ ಗುತ್ತಿಗೆದಾರರ ನೋಂದಣಿ ಪ್ರಮಾಣ ಪತ್ರ, ತೆರಿಗೆ ಹಾಗೂ ವ್ಯಾಟ ಪ್ರಮಾಣ ಪತ್ರವನ್ನು ಟೆಂಡರುಗಳೊಂದಿಗೆ ನೀಡುವುದು.
4. ನಿಗದಿ ಪಡಿಸಿರುವ ಮುಂಗಡ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ **"ಪೌರಾಯುಕ್ತರು, ನಗರಸಭೆ ಕಾರವಾರ"** ರವರ ಹೆಸರಿಗೆ ಕಾರವಾರದಲ್ಲಿ ಪಾವತಿಯಾಗುವಂತೆ ತೆಗೆದು ಟೆಂಡರ ಜೊತೆ ಸಲ್ಲಿಸತಕ್ಕದ್ದು.
5. ಶರತ್ತು ಕ್ರಮ ಸಂಖ್ಯೆ 2, 3, ಮತ್ತು 4 ರಂತೆ ಪ್ರಮಾಣ ಪತ್ರ ಹಾಗೂ ಮುಂಗಡ ಠೇವಣಿಯನ್ನು ತುಂಬದೇ ಇದ್ದ ಟೆಂಡರಗಳನ್ನು ತಿರಸ್ಕರಿಸಲಾಗುವುದು.

6. ಎಲ್ಲಾ ಪ್ಯಾಕೇಜಗಳಗೆ ಬಿಡ್ಡುದಾರರು ನೀಡಿರುವ ದರಗಳು ಒಂದು ವರ್ಷದ ಕಾಲಾವಧಿಗೆ ಸಿಂಧುತ್ವ ಇರುತ್ತದೆ.
7. ಗುತ್ತಿಗೆದಾರರು ಸ್ವತಃ ಕಾಮಗಾರಿ ಸ್ಥಳ ಪರಿಶೀಲಿಸಿದ ನಂತರವೇ ಟೆಂಡರ ಸಲ್ಲಿಸತಕ್ಕದ್ದು.
8. ದಿನಾಂಕ:- 13-04-2010 ರಂದು ಬೆಳಗ್ಗೆ 11.00 ಗಂಟೆಗೆ, ನಗರಸಭೆಯ ಸಭಾ ಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವೀಕೃತವಾಗಿರುವ ಟೆಂಡರಗಳನ್ನು ಹಾಗೂ ದರವಾರಗಳನ್ನು ತೆರೆಯಲಾಗುವುದು. ಎಲ್ಲಾ ಬಿಡ್ಡುಗಳನ್ನು ತೆರೆದ ನಂತರ ಅರ್ಹ ಬಿಡ್ಡುದಾರರ ವಿವರವನ್ನು ನಗರಸಭೆಯಿಂದ ತಿಳಿಸಲಾಗುವುದು.
9. ಅಂತಿಮವಾಗಿ ಆಯ್ಕೆಯಾದ ಗುತ್ತಿಗೆದಾರರಿಗೆ ನೀಡುವ ಸೂಚನಾ ಪತ್ರದಂತೆ, ಕಾಮಗಾರಿಯ ಶೇ 5.00% ರಷ್ಟನ್ನು ನಗರಸಭೆಗೆ ಡಿ.ಡಿ. ಅಥವಾ ಬ್ಯಾಂಕ ಗ್ಯಾರಂಟಿ ಮೂಲಕ 20 ದಿನದ ಕಾಲಾವಕಾಶದಲ್ಲಿ ಮುಂದಿನ ನಿರ್ವಹಣೆ ಅವಧಿ (2 ವರ್ಷ ಕಾಲ) ವರೆಗೆ ಸಿಂಧು ಇರುವಂತೆ ಭರಣ ಮಾಡುವುದು, ತದನಂತರ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲಾಗುವುದು. ಈ ರೀತಿಯಾಗಿ ನಿಯಮ ಪಾಲಿಸದ ಗುತ್ತಿಗೆದಾರರ ಟೆಂಡರನ್ನು ರದ್ದು ಪಡಿಸಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಮಾಡಿಕೊಂಡು 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು.
10. ಅಂತಿಮವಾಗಿ ಆಯ್ಕೆಯಾದ ಗುತ್ತಿಗೆದಾರರಿಗೆ, ಕಾಲಕಾಲಕ್ಕೆ ಅನುದಾನ ಬಿಡುಗಡೆಯಾದಂತೆ ಕಾರ್ಯಾದೇಶವನ್ನು ನೀಡಿ ಪ್ರತ್ಯೇಕ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದಲ್ಲಿ ಬಿಲ್ಲನ್ನು ಪಾವತಿ ಮಾಡಲಾಗುವುದು.
11. ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು ಮತ್ತು ಕಾಮಗಾರಿಯ ಸ್ಥಳದಲ್ಲಿ ಗುತ್ತಿಗೆದಾರರ ವತಿಯಿಂದ ಡಿಪ್ಲೋಮಾ/ಬಿ.ಇ ವಿದ್ಯಾರ್ಹತೆಯ ವ್ಯಕ್ತಿಯನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸುವುದು.
12. ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿತೆಗೆಯತಕ್ಕದ್ದು [ಕಾಮಗಾರಿಯ ಪೂರ್ವದಲ್ಲಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ]
13. ಟೆಂಡರಿನಲ್ಲಿ ಇಟ್ಟ ಅವಧಿಯು ಮಳೆಗಾಲವನ್ನು ಹೊರತು ಪಡಿಸಿದ್ದು, ಗುತ್ತಿಗೆದಾರರು ಟೆಂಡರಿನಲ್ಲಿ ಇಟ್ಟ ಅವಧಿಯಲ್ಲಿ ಕಾಮಗಾರಿ ಪೂರ್ತಿಗೊಳಿಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದು ಗೊಳಿಸಿ 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು. ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.
14. ಕಾಮಗಾರಿ ಪ್ರಾರಂಭ ಮಾಡುವ ಮುನ್ನವೇ ಸಾಮಗ್ರಿಗಳ ಗುಣ ಮಟ್ಟದ ಬಗ್ಗೆ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ನಗರಸಭೆಯಿಂದ ನಿಯೋಜನೆ ಗೊಂಡ ಮೂರನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಪಡೆದ ನಂತರವೇ ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿ ಮಾಡಲಾಗುವುದು.
15. ಕಾಮಗಾರಿಯ ಮುಕ್ತಾಯದ ನಂತರ ನಿರ್ವಹಣಾ ಅವಧಿ 2 ವರ್ಷ ಇದ್ದು ಗುಣಮಟ್ಟವನ್ನು ಪರಿಶೀಲಿಸಿ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು.
16. ಟೆಂಡರನ್ನು ಮಂಜೂರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.
17. ಹೆಚ್ಚಿನ ವಿವರಗಳಗಾಗಿ ನಗರಸಭೆಯಲ್ಲಿ ವಿಚಾರಿಸಬಹುದು ಅಥವಾ ನಗರಸಭೆಯ ಅಂತರಜಾಲ www.karwarcity.gov.in ನಲ್ಲಿ ಪಡೆಯಬಹುದಾಗಿದೆ.

| | | |
|---|---|---|
| **ಸಹಿ ಇದೆ.** | **ಸಹಿ ಇದೆ.** | **ಸಹಿ ಇದೆ.** |
| [ ಎ.ಡಿ. ರೇವಣಕರ] | [ಡಾ॥ ನಿತಿನ್ ಎಸ್. ಪಿಕ್ಕಳೆ] | [ಗಣಪತಿ.ಡಿ.ಉಳವೇಕರ] |
| ಪೌರಾಯುಕ್ತರು | ಚೇರಮನ್ | ಅಧ್ಯಕ್ಷರು |
| ನಗರಸಭೆ ಕಾರವಾರ | ಸ್ಥಾಯಿ ಸಮಿತಿ | ನಗರಸಭೆ ಕಾರವಾರ |
| | ನಗರಸಭೆ ಕಾರವಾರ | |